to supply the cylinders. Improvement in supply of LPG cylinders is found, after the issue of said orders. Subsidised domestic LPG connections are part of the Public Distribution System of the Government of India. Though the state government has taken action as above, in case of shortage of cylinders, it is the responsibility of the Government of India to control the concerned oil companies and the gas distributors and to take action to improve the situation.

ಮೀನುಗಾರರಿಗೆ ಮನೆ ಕಟ್ಟಲು ನೀಡುವ ಸಹಾಯ ಧನವನ್ನು ಹೆಚ್ಚಿಸುವುದು

834 (900) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆಯಡಿ ಬಡವರಾದ ಮೀನುಗಾರರಿಗೆ ಮನೆ ಕಟ್ಟಿಕೊಳ್ಳಲು ಈಗಿರುವ ಸಹಾಯಧನವನ್ನು ರೂ.1.25 ಲಕ್ಷಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ಪೂರ್ಣ ಮಾಹಿತಿ ನೀಡುವುದು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಇಲ್ಲ.

ಆ) ನಿರ್ವಸಿತರಾದವರಿಗೆ ವಸತಿ ಸೌಕರ್ಯ ಕಲ್ಪಿಸಿಕೊಳ್ಳಲು ಆಶ್ರಯ ಮತ್ತು ಇಂದಿರಾ ಆವಾಸ್ ಯೋಜನೆಗಳು ಜಾರಿಯಲ್ಲಿದ್ದು, ಈ ಯೋಜನೆಗಳಡಿ ಮನೆ ನಿರ್ಮಾಣದ ಘಟಕ ವೆಚ್ಚದ ಸಹಾಯಧನದ ಮೊತ್ತ ರೂ.50,000-00 ಗಳಾಗಿರುತ್ತದೆ. ಆದಾಗ್ಯೂ, ಮೀನುಗಾರಿಕೆ ಇಲಾಖೆಯ ಮತ್ಸ್ಯಾಶ್ರಯ ಯೋಜನೆಯಡಿ 2011-12ನೇ ಸಾಲಿನಿಂದ ನಿರ್ಮಾಣ ಮಾಡುವ ಮನೆಗಳ ಘಟಕ ವೆಚ್ಚದ ಸಹಾಯಧನವನ್ನು ಆದೇಶ ಸಂಖ್ಯೆ:ಪಸಂಮೀ/176/ಮೀಇಯೋ/2011, ದಿನಾಂಕ: 29-11-2011ರಲ್ಲಿ ರೂ.60,000-00 ಗಳಿಗೆ ಹೆಚ್ಚಿಸಲಾಗಿದೆ.

834 (900) Sri Dhinakara Keshava Shetty (Kumata) : Minister for fisheries, Science and Technology,

a) Is there any proposal before the Government to enhance the assistance amount to Rs. 1.25 lakh to construct Houses for the poor fishermen under Mathsyashraya Schemes;

b) If not, what are the reasons, Give complete information?

Sri. Annand Vasanth Asnotikar (Minister for Fisheries, Science and Technology) :

a) No.

b Under the Schemes of Ashraya and Indira Avas a financial assistance of Rs.50,000-00 is being given to construct the Houses for Houseless. In spite of that, Fisheries Department has increased the financial assistance to construct Houses under Mathsyashraya Scheme to Rs.60,000-00 per unit from the year 2011-12 vide, G.O. No.AHF / 176 / SFS / 2011, dated: 29-11-2011.

ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು

835 (901) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರ್ಯ ಬಂದು 64 ವರ್ಷಗಳಾದರೂ ಕುಮಟಾ ತಾಲ್ಲೂಕಿನ ಸೊಪ್ಪಿನ ಹೊಸಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ಮಾಹಿತಿ ನೀಡುವುದು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಕುಮಟಾ ತಾಲ್ಲೂಕಿನ ಸೊಪ್ಪಿನ ಹೊಸಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೇದಿನಿ ಗ್ರಾಮಕ್ಕೆ ವಿದ್ಯುತ್ ಸರಬರಾಜು ಇಲ್ಲದಿರುವುದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ಗಮನಕ್ಕೆ ಬಂದಿರುತ್ತದೆ.